ಶ್ರೀ ಎಸ್.ಎಂ.ಕೃಷ್ಣ (ಮಾನ್ಯ ಮುಖ್ಯ ಮಂತ್ರಿಗಳು):

1) ಆಡಳಿತ ಸುಧಾರಣಾ ಆಯೋಗವು ಕೆಲವೊಂದು ಹುದ್ದೆಗಳನ್ನು ಗುರುತಿಸಿದ್ದು ಹೊಸ ಪದ್ಧತಿಗಳನ್ನು ಅಳವಡಿಸಿದ ನಂತರ ಆ ಹುದ್ದೆಗಳು ಹೆಚ್ಚುವರಿಯಾಗುತ್ತದೆ. ಈ ಹುದ್ದೆಗಳಲ್ಲಿ ಇರುವ ನೌಕರರನ್ನು ಖಾಲಿ ಹುದ್ದೆಗಳಲ್ಲಿ ಮರು ನೇಮಕಾತಿ ಮಾಡುವಂತೆ ಆಯೋಗವು ಶಿಫಾರಸ್ಸು ಮಾಡಿರುತ್ತದೆ. ವಿಭಾಗೀಯ ಹಾಗೂ ಜಿಲ್ಲಾ ಹಂತಗಳಲ್ಲಿ ಸುಮಾರು 4700 ಮತ್ತು ಸಚಿವಾಲಯದ ಹಂತದಲ್ಲಿ 774 ಹುದ್ದೆಗಳನ್ನು ಗುರುತಿಸಿದೆ.

2) ಮತ್ತು 3) ಆಡಳಿತ ಸುಧಾರಣಾ ಆಯೋಗದ ಶಿಫಾರಸ್ಸುಗಳನ್ನು ಸಂಬಂಧಿತ ಇಲಾಖೆಗಳಲ್ಲಿ ಪರಿಶೀಲನೆಯಲ್ಲಿದೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಅಧ್ಯಕ್ಷತೆಯಲ್ಲಿ ರಚಿತವಾದ ಒಂದು ಸಚಿವ ಸಂಪುಟದ ಉಪ ಸಮಿತಿಯು ಸಹ ಪರಿಶೀಲಿಸುತ್ತಿದೆ. ಈ ವಿಷಯದಲ್ಲಿ ಅಂತಿಮ ತೀರ್ಮಾನ ತೆಗೆದುಕೊಂಡ ನಂತರ ಮಾತ್ರ ರದ್ದಾಗಬಹುದಾದ ಹುದ್ದೆಗಳ ಸಂಖ್ಯೆ. ಹಾಗೂ ಅದರಿಂದಾಗುವ ಉಳಿತಾಯದ ಮಾಹಿತಿಯು ಲಭ್ಯವಾಗುತ್ತದೆ.

. ವರುಣಾ ನಾಲ ನೀರಾವರಿ ಅಚ್ಚುಕಟ್ಟು ಪ್ರದೇಶದ ರಸ್ತೆಗಳ ನಿರ್ಮಾಣ.

3016(3515)

ಶ್ರೀ ಎ.ಎಸ್.ಗುರುಸ್ವಾಮಿ(ಚಾಮುಂಡೇಶ್ವರಿ ಕ್ಷೇತ್ರ): ಮಾನ್ಯ ಜಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಹೊಲಗಾಲುವೆಗಳ ನಿರ್ಮಾಣದ ಜೊತೆಗೆ ರೈತರ ಉತ್ಪನ್ನಗಳ ಸಾಗಾಣಿಕೆಗೆ ನೀರಾವರಿ ಅಚ್ಚುಕಟ್ಟು ಪ್ರದೇಶದ ರಸ್ತೆಗಳನ್ನು ನಿರ್ಮಿಸುವ ಕಾರ್ಯ ಎಷ್ಟರಮಟ್ಟಿಗೆ ಜಾರಿಗೆ ಬಂದಿದೆ?

ಆ. ವರುಣಾ ನಾಲಾ ಅಚ್ಚುಕಟ್ಟಿನಲ್ಲಿ ಎಷ್ಟು ಕಿಲೋಮೀಟರ್ ನೀರಾವರಿ ಅಚ್ಚುಕಟ್ಟು ಪ್ರದೇಶದ ರಸ್ತೆ ನಿರ್ಮಾಣ ಮಾಡಲಾಗಿದೆ?

ಇ. ಅಚ್ಚುಕಟ್ಟು ರಸ್ತೆ ನಿರ್ಮಾಣ ಕಾರ್ಯ ಯಾವಾಗ ಮುಗಿಯಲಿದೆ. ಇದಕ್ಕೆ ಬೇಕಾದ ಹಣವೆಷ್ಟು?

ಶ್ರೀ ಹೆಚ್.ಕೆ.ಪಾಟೀಲ್ (ಜಲ ಸಂಪನ್ಮೂಲ ಸಚಿವರು):

ಅ. ರಾಜ್ಯದ ಎಲ್ಲ ಕಾಡಾಗಳ ವ್ಯಾಪ್ತಿಯಲ್ಲಿ ಇದುವರೆಗೂ ಸುಮಾರು 6432 ಕಿ.ಮೀ. ಉದ್ದದ ಅಚ್ಚುಕಟ್ಟು ರಸ್ತೆಗಳನ್ನು ನಿರ್ಮಿಸಲಾಗಿದೆ.

ಆ. ವರುಣಾ ನಾಲಾ ಅಚ್ಚುಕಟ್ಟಿನಲ್ಲಿ 3.3 ಕಿ.ಮೀ. ಉದ್ದದ ಅಚ್ಚುಕಟ್ಟು ರಸ್ತೆ ನಿರ್ಮಿಸಲಾಗಿದೆ.

ಇ. ಪ್ರಸ್ತುತ ಎಲ್ಲಾ ಕಾಡಾಗಳಲ್ಲಿರುವ 3708 ಕಿ.ಮೀ. ಉದ್ದದ ಅಚ್ಚುಕಟ್ಟು ರಸ್ತೆಗಳನ್ನು ಹಣಕಾಸು ಲಭ್ಯತೆಗೆ ಅನುಗುಣವಾಗಿ ಆದ್ಯತೆಯ ಮೇಲೆ ಮುಗಿಸಲಾಗುವುದು. ಈಗಿನ ಅಂದಾಜಿನ ಪ್ರಕಾರ ಸುಮಾರು ರೂ.9678 ಲಕ್ಷಗಳಷ್ಟು ಹಣ ಬೇಕಾಗುವುದು.

ಹಾರ್ನಳ್ಳಿ ರಾಮಸ್ವಾಮಿ ಆಯೋಗದ ವರದಿ.

3017(3516)

ಶ್ರೀ ಗುರುಸ್ವಾಮಿ ಎ.ಎಸ್.(ಚಾಮುಂಡೇಶ್ವರಿ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಟ್ಟು ಉತ್ತರಿಸುವರೆ?

ಅ) ಹಾರ್ನಳ್ಳಿ ರಾಮಸ್ವಾಮಿ ಆಯೋಗ ನೀಡಿದ ವರದಿ ಮೇಲೆ ಆಡಳಿತ ಸುಧಾರಣೆಗೆ ಸಂಬಂಧಿಸಿದಂತೆ ಸರ್ಕಾರ ಕೈಗೊಂಡಿರುವ ಕ್ರಮವೇನು?

ಆ) ಈ ವರದಿಯ ಆಧಾರದ ಮೇಲೆ ಸರ್ಕಾರ ಆದೇಶವನ್ನು ಹೊರಡಿಸಿ ಜಾರಿಗೆ ಕೊಡಲಾಗಿದೆಯೇ? ಹಾಗಿದ್ದಲ್ಲಿ ಜಿಲ್ಲೆ ಮತ್ತು ತಾಲ್ಲೂಕು ಮಟ್ಟದಲ್ಲಿ ತರಲಾಗಿರುವ ಆಡಳಿತ ಸುಧಾರಣೆಯ ಕ್ರಮಗಳೇನು?

ಇ) ಬ್ರಿಟಿಷ್ ರಾಜ್ಯ ವ್ಯವಸ್ಥೆ ಶೇಕಡ 50ಕ್ಕೂ ಹೆಚ್ಚು ಭಾಗದಲ್ಲಿ ಮುಂದುವರಿಯುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದರೆ, ಈ ವ್ಯವಸ್ಥೆಯನ್ನು ಭಾರತೀಕರಣಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು?

ಉ) ಮುಂದುವರೆದಿರುವ ಮಾಹಿತಿ ತಂತ್ರಜ್ಞಾನ ವ್ಯವಸ್ಥೆಯಿಂದ ಹಿಂದಿನ ಉಳಿಗಮಾನ್ಯ ಬ್ರಿಟಿಷ್ ವ್ಯವಸ್ಥೆಯನ್ನು ತೊಡೆದು ಹಾಕಿ ಇತ್ತೀಚಿನ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲು ಸರ್ಕಾರ ಕೈಗೊಂಡಿರುವ ಕ್ರಮವೇನು?